# ಬಿಸಿಲುನಾಡಿನ ತಂಪು ತಾಣ
# ಕಲಾಧಾಮ




**ಬಳ್ಳಾರಿಯ ತೋರಣಗಲ್ ಸಮೀಪ ರೂಪುಗೊಂಡಿರುವ 'ಕಲಾಧಾಮ' ಪ್ರವಾಸಿಗರಿಗೆ ಬೇಸಿಗೆಯಲ್ಲೂ ತಂಪಾದ ಅನುಭವ ನೀಡುವ ಸುಂದರ ತಾಣ.**

■ **ಉಮಾ ಅನಂತ್**

ಬಳ್ಳಾರಿಯ ಖಡಕ್ ಬಿಸಿಲಿಗೆ ಥರಗುಟ್ಟುವವರೇ ಹೆಚ್ಚು. ಇಂಥ ಪ್ರದೇಶದಲ್ಲಿ ಮೈಮನಕ್ಕೆ ತಂಪು ನೀಡುವ ತಾಣವೊಂದು ಪ್ರವಾಸಿಗರನ್ನು ಬರಸೆಳೆಯುತ್ತಿದೆ. ಅದುವೇ ಇತಿಹಾಸ, ಕಲೆ, ಸಂಸ್ಕೃತಿ, ಪರಂಪರೆಯ ಪ್ರತೀಕವಾಗಿ ತಲೆಯೆತ್ತಿರುವ 'ಕಲಾಧಾಮ'.

ವಿಜಯನಗರ ಸಾಮ್ರಾಜ್ಯದ ಐತಿಹಾಸಿಕ ಪರಂಪರೆ ಕಲಾಧಾಮದಲ್ಲಿ ವೈಭವದೊಂದಿಗೆ ಜೀವಂತಗೊಂಡಿರುವುದು ಸಂತೋಷವನ್ನು ಉಂಟುಮಾಡುತ್ತದೆ. ಹಂಪಿಯಿಂದ 25 ಕಿ.ಮೀ. ದೂರದಲ್ಲಿದೆ ಈ ಕಲಾಧಾಮ. ಅತ್ಯಾಕರ್ಷಕ ಕಟ್ಟಡ ವಿನ್ಯಾಸಗಳು, ಎಲ್ಲೆಲ್ಲೂ ಹಸುರು ಹಸುರು ತಂಪು ವಾತಾವರಣ ಆಹ್ಲಾದಕರವಾಗಿದೆ.

ಆಸ್ಟ್ರೇಲಿಯಾದ ಕಲಾವಿದೆ ಸಾರಾ ಕೆಂಡ್ರಲೈನ್ ಅವರ ಕಲ್ಪನೆಯಲ್ಲಿ ಸಾಕಾರಗೊಂಡಿದೆ ಈ ಕಲಾಧಾಮ. ಹಂಪಿ ವೈಭವವನ್ನು 3ಡಿ ಪ್ರದರ್ಶನದಲ್ಲಿ ಕಣ್ತುಂಬಿಕೊಳ್ಳುವ ವ್ಯವಸ್ಥೆಯನ್ನೂ ಇಲ್ಲಿ ಮಾಡಲಾಗಿದೆ. ಹಂಪಿಯ ಇಡೀ ಚಿತ್ರವೈಭವವನ್ನು ಆಸ್ಟ್ರೇಲಿಯಾದ ಛಾಯಾಚಿತ್ರಗಾರ ಜಾರ್ಜ್‌ಮಿಶೆಲ್ ಸೆರೆಹಿಡಿದಿದ್ದಾರೆ. ಚಿತ್ರಗಳನ್ನು 3ಡಿ ಇಮೇಜ್‌ನಲ್ಲಿ ನೋಡುವಾಗ ನಿಜವಾದ ಹಂಪಿಯನ್ನೇ ನೋಡಿದಂತೆ ಅನುಭವವಾಗುತ್ತದೆ.

ಇಲ್ಲಿನ ಬಯಲು ರಂಗಮಂದಿರ ಕೂಡ ಪಾರಂಪರಿಕ ರೀತಿಯಲ್ಲೇ ನಿರ್ಮಿಸಲಾಗಿದೆ, ಮರಗಿಡಗಳಿಂದ ಕೂಡಿದ ತಣ್ಣನೆಯ ಪರಿಸರ, ವಿಜಯನಗರ ಸಾಮ್ರಾಜ್ಯವನ್ನು ನೆನಪಿಸುವ ಹಲವು ವೈವಿಧ್ಯಮಯ ಕಟ್ಟಡಗಳ ಪಡಿಯಚ್ಚು ಇಲ್ಲಿ ಗಮನಸೆಳೆಯುತ್ತವೆ. ಜೆಎಸ್‌ಡಬ್ಲ್ಯು ಪ್ರತಿಷ್ಠಾನದ ಅಧ್ಯಕ್ಷೆ ಸಂಗೀತಾ ಜಿಂದಾಲ್ ಅವರ ಕಲ್ಪನೆಯ ಕನಸು ಇಲ್ಲಿ 'ಕಲಾಧಾಮ'ವಾಗಿ ರೂಪುಗೊಂಡಿದೆ. ವಿಜಯನಗರ ಸಾಮ್ರಾಜ್ಯದ ಅದ್ಭುತ ಪರಂಪರೆಯನ್ನು ಉಳಿಸುವ ಮಹತ್ವಾಕಾಂಕ್ಷೆ ಇದರ ಹಿಂದಿದೆ.

"ಯಾತ್ರಿಗಳಿಗೆ, ಶಾಲಾ ಮಕ್ಕಳಿಗೆ ಸುಂದರವಾದ ತಂಪು ತಾಣ ಪ್ರವಾಸಿ ಸ್ಥಳವಾಗಿ ಅನುಕೂಲವಾಗಲೆಂದೇ ನಿರ್ಮಿಸಲಾಗಿದೆ. ಹಂಪಿ ವೈಭವ, ಐತಿಹಾಸಿಕ ಪರಂಪರೆಯ ತಾಣವನ್ನು ಇಲ್ಲಿ ಜತನವಾಗಿ ಕಾಪಾಡಿಕೊಂಡು ಬರುವ ಉದ್ದೇಶವನ್ನು 'ಕಲಾಧಾಮ' ಹೊಂದಿದೆ" ಎನ್ನುತ್ತಾರೆ ಸಂಗೀತಾ ಜಿಂದಾಲ್.

'ಈ ಕಲಾಧಾಮ ಸುಮಾರು 10 ಎಕರೆ ವಿಸ್ತಾರವಾದ ಜಾಗದಲ್ಲಿದೆ. ಆಸ್ಟ್ರೇಲಿಯಾದ ವಿಕ್ಟೋರಿಯಾ ವಸ್ತು ಸಂಗ್ರಹಾಲಯದ ಸಹಯೋಗದಿಂದ ರೂಪುಗೊಂಡಿದೆ' ಎಂದು ವಿವರ ನೀಡುತ್ತಾರೆ ಅವರು. ■



### ಹೋಗುವುದು ಹೇಗೆ?

ಬೆಂಗಳೂರಿನಿಂದ ಬಳ್ಳಾರಿಗೆ 312 ಕಿ.ಮೀ. ಇಲ್ಲಿಂದ ಸಂಡೂರಿಗೆ ಬೇಕಾದಷ್ಟು ಬಸ್‌ಗಳು ಸಿಗುತ್ತವೆ. ಸಂಡೂರು ತಾಲ್ಲೂಕಿನ ವಿದ್ಯಾನಗರದಲ್ಲಿರುವ ಜೆಎಸ್‌ಡಬ್ಲ್ಯು ಟೌನ್‌ಶಿಪ್ ಒಳಗಡೆ ಈ ಕಲಾಧಾಮವಿದೆ. ಬೆಂಗಳೂರಿನಿಂದ ವಿದ್ಯಾನಗರ ಟೌನ್‌ಶಿಪ್‌ಗೆ ವಿಮಾನದ ಮೂಲಕ ಹೋದರೆ ಒಂದು ಗಂಟೆಯಲ್ಲಿ ತಲುಪಬಹುದು. ರೈಲು ಸೌಲಭ್ಯವೂ ಇದ್ದು, ಹಂಪಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಹೋದರೆ ತೋರಣಗಲ್ ನಿಲ್ದಾಣದಲ್ಲಿ ಇಳಿಯಬೇಕು. ಖಾಸಗಿ ಹಾಗೂ ಸರ್ಕಾರಿ ಬಸ್‌ಗಳ ಸೌಲಭ್ಯವೂ ಇದೆ. ಉಳಿದುಕೊಳ್ಳಲು ಹೋಟೆಲ್ ಸೌಲಭ್ಯವಿದೆ. ಮಂಗಳವಾರ ಕಲಾಧಾಮಕ್ಕೆ ರಜೆ. ಪ್ರವೇಶ ಉಚಿತ.